ಸಂದುಹೋದ ಸುವರ್ಣಯುಗವನ್ನು ಈ ಪಠ್ಯ ವರ್ಣಿಸುತ್ತದೆ ಎಂದು ಯಾರೂ ತಿಳಿಯಬಾರದು. ಹೆಣ್ಣು ಅಸಹಾಯಕಳು, ಅಬಲೆ ಎಂದು ಅವಳು ತಿಳಿದುಕೊಳ್ಳಬೇಕು ಎನ್ನುವ ಗಂಡಾಳಿಕೆಯ ಹುನ್ನಾರವನ್ನು ಸಹಜವಾಗಿ ಎದುರಿಸುವ ದಾರಿಯೂ ಒಂದಿದೆ ಎನ್ನುವುದನ್ನು ಹೆಣ್ಣು ತನ್ನೊಳಗಿನ ಜ್ಞಾನದಿಂದಲೇ ಪಡೆದುಕೊಳ್ಳಬಹುದಾದ ಸಾಧ್ಯತೆಯೊಂದರ ಕಡೆಗೆ ಇದರ ಒತ್ತಿದೆ. ಶೋಷಣೆಗೆ ಒಳಗಾಗುವ ಅನೇಕ ಹೆಣ್ಣುಮಕ್ಕಳ ಕಥನವೂ ಇಲ್ಲಿದೆ. ತನ್ನದಲ್ಲದ ತಪ್ಪಿಗೆ ದುರಂತಕ್ಕೀಡಾಗುವ ಹೆಣ್ಣುಮಕ್ಕಳನ್ನು ಚಿತ್ರಿಸುವಾಗ ವಾಸ್ತವವನ್ನು ಅದು ಮುಖಾಮುಖಿಯಾಗುತ್ತದೆ. ಶಿಕ್ಷಣ ಪಡೆಯುವ ಆಸೆಯಿದ್ದೂ ಅದನ್ನು ಪಡೆಯಲಾಗದ, ಆಯ್ಕೆಯ ಬದುಕನ್ನು ಕಟ್ಟಿಕೊಳ್ಳಲಾಗದ ವಿವರಗಳೂ ಕಾದಂಬರಿಯಲ್ಲಿವೆ.

ಇದಿಷ್ಟು ಒಂದು ಆಯಾಮವಾದರೆ, ಕಾದಂಬರಿ ಕಟ್ಟಿಕೊಡುವ ದಟ್ಟ ಸಾಂಸ್ಕೃತಿಕ ವಿವರಗಳು ಕಾದಂಬರಿಗೆ ಸಾಂಸ್ಕೃತಿಕ ಪಠ್ಯದ ನೆಲೆಯನ್ನೂ ಭದ್ರವಾಗಿ ಕಟ್ಟಿಕೊಡುತ್ತವೆ. ಎಂ.ಎನ್. ಶ್ರೀನಿವಾಸ್ ಅವರ ಬಹುಚರ್ಚಿತ ಕೃತಿ **Remembered Village**ಗೂ ಈ ಕೃತಿಗೂ ಇರುವ ಸಂಬಂಧಾಂತರಗಳನ್ನು ಗಮನಿಸಿದರೆ ಸಾಹಿತ್ಯಕ್ಕೂ ಸಮಾಜವಿಜ್ಞಾನಕ್ಕೂ ಇರುವ ವ್ಯತ್ಯಾಸಗಳೂ ನಮಗೆ ತಿಳಿಯುತ್ತವೆ. ಸಾಂಸ್ಕೃತಿಕ ಪರಂಪರೆ ನಿರ್ಜೀವ ಆಚರಣೆಗಳಲ್ಲಲ್ಲ, ಅದನ್ನು ಜೀವಂತವಾಗಿಸುವ ಮಾನವೀಯ ಪರಿಸರದಲ್ಲಿ ಇರುವ ಸತ್ಯವನ್ನು ತುಸು ಅತಿ ಎನ್ನುವ ಹಾಗೆಯೇ ಈ ಕೃತಿ ಕಟ್ಟಿಕೊಡುತ್ತದೆ. ಎಡೆಗೆ ಸಿದ್ಧಪಡಿಸುವಾಗ, ದೇವರಿಗೆ ಸಿದ್ಧ ಮಾಡುವಂತೆಯೇ ಆಳುಗಳಿಗೂ, ಕೃಷಿಯ ಉಪಕರಣಗಳಿಗೂ ಮಾಡುವುದೇ ನಿಜವಾದ ಸಂಸ್ಕೃತಿ ಎನ್ನುವುದು ಶ್ರಮಮೂಲ ಸಂಸ್ಕೃತಿಯ ಕಟ್ಟೋಣವಾಗಿ ನಮಗೆ ಕಾಣಿಸುತ್ತದೆ. ಆಧುನಿಕತೆಯ ಹಿನ್ನೆಲೆಯಲ್ಲಿ ಇದು ನಿಧಾನವಾಗಿ ಬದಲಾಗುತ್ತಿರುವುದನ್ನು ಕಾದಂಬರಿ ವಿಷಾದದಲ್ಲಿ ನಮಗೆ ಕಾಣಿಸುತ್ತದೆ. ಆಳುಗಳಿಗೆಂದೇ ನಿರ್ದಿಷ್ಟವಾಗಿ ಎಡೆಯಿಡುತ್ತಿದ್ದ ಅದೇ ಮಾನವೀಯ ಪರಿಸರವು ಆಳುಮಗನೊಬ್ಬ ತೆಂಗಿನ ಹೋಳೊಂದನ್ನು ಕಚ್ಚಿ ತಿಂದದ್ದಕ್ಕಾಗಿ ಅವನಿಗೆ ಬೀಸಿ ಹೊಡೆಯುವ ಅಮಾನವೀಯ ಘಟನೆಗೂ ಸಾಕ್ಷಿಯಾಗಬೇಕಾಗುತ್ತದೆ. ಬದಲಾವಣೆಯ ಈ ಪಲ್ಲಟಗಳು ಆಧುನಿಕತೆಯದ್ದು ಮಾತ್ರವಲ್ಲ, ಎಲ್ಲ ಕಾಲದಲ್ಲಿಯೂ ಇದ್ದೇ ಇರುವ ಅಮಾನವೀಯ ಧೋರಣೆಯ ಸಂಕೇತವೂ ಹೌದು.

ಆಧುನಿಕತೆ ಎಂದಾಗ ಕಾದಂಬರಿ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತ ಊರಿನ ನಾಯಕರು ಅದಕ್ಕಾಗಿ ನಡೆಸುವ ಹೋರಾಟವನ್ನೂ ಹೇಳುತ್ತದೆ. ತಮ್ಮದೇ ಜಮೀನನ್ನು ಊರಿನ ಶಾಲೆಗೆ ಕೊಡುವ, ಅದರ ಖರ್ಚುವೆಚ್ಚಗಳನ್ನು ಹೊರುವ ನಾಯಕರು, ರಸ್ತೆಯ ನಿರ್ಮಾಣಕ್ಕಾಗಿ ವಿರೋಧಗಳನ್ನು ಎದುರಿಸಿಯೂ ಊರನ್ನು ಆಧುನಿಕಗೊಳಿಸಲು ನಡೆಸುವ ಪ್ರಯತ್ನಗಳು... ಇವೆಲ್ಲವೂ ಭಾರತದ ಯಾವುದೇ ಹಳ್ಳಿಯ ಕಥನಗಳಾಗಬಹುದು.

ಆಧುನಿಕತೆಯ ಕಡೆಗೆ ಚಲಿಸುತ್ತಿರುವ ಹಳ್ಳಿಯನ್ನು ಚಿತ್ರಿಸುವ ಅನೇಕ ಪಠ್ಯಗಳು ನಮ್ಮಲ್ಲಿ ಬಂದಿವೆ. ಆದರೆ, ಹಳ್ಳಿಯ ಸಾಂಸ್ಕೃತಿಕ ಸಮೃದ್ಧತೆಗೂ, ಹೆಣ್ಣು ಮತ್ತು ಸಂಸ್ಕೃತಿಗಿರುವ ಕರುಳಬಳ್ಳಿಯ ಸಂಬಂಧವನ್ನು ಚಿತ್ರಿಸುತ್ತಲೇ ಅನಾಯಾಸವಾಗಿ ಅದು ಮಹಿಳಾ ಸಂಕಥನಕ್ಕೆ ಮುಖ್ಯವಾದ ಸೇರ್ಪಡೆಯೂ ಆಗುವ ಅಪರೂಪದ ಪಠ್ಯವಾಗಿ ಮಣಿಬಾಲೆ ರಚಿತವಾಗಿದೆ. ಇದೆಲ್ಲವೂ ಸೋದ್ದಿಶ್ಯ ಎಂದೇನೂ ನಾನು ಹೇಳುತ್ತಿಲ್ಲ. ಆದರೆ, ಬಾಲ್ಯದ ಸಾಂದ್ರವಾದ ಅನುಭವಲೋಕವನ್ನು ಅದರ ತೀವ್ರತೆಯನ್ನು ಕಳೆದುಕೊಳ್ಳದೆ ಕಟ್ಟಿಕೊಡಬಲ್ಲ ಚಿತ್ರಕ ಶಕ್ತಿ ಸುಜಾತಾ ಅವರಿಗಿದೆ. ಭಾಷೆ ಆರಂಭದಲ್ಲಿ ತೊಡಕು ಎನ್ನಿಸಿದರೂ ಅದರ ಲಯದ ಮೇಲೆ, ಪ್ರಯೋಗಗಳ ಮೇಲೆ ತುಸು ಹಿಡಿತ ಸಿಕ್ಕಿದ ಮೇಲೆ ಅದು ನಮ್ಮನ್ನು ಬೇರೆಯದೇ ಲೋಕಕ್ಕೆ ಕೊಂಡೊಯ್ಯುತ್ತದೆ. ಭಾಷೆಯೇ ಮೂಲವಾಗಿ ತಾನು ಹೇಳಬೇಕಾದ್ದನ್ನು ಚಿತ್ರವತ್ತಾಗಿ ಹೇಳಲು ಸುಜಾತಾ ಅವರಿಗೆ ಸಾಧ್ಯವಾಗಿದೆ. ನಿಜ, ಕೆಲವೊಮ್ಮೆ ವಿವರಗಳು ಅತಿ ಎನ್ನಿಸುತ್ತದೆ, ಕೆಲವು ಕಡೆ ಪುನರಾವರ್ತನೆ ಎಂದೂ ಅನ್ನಿಸುತ್ತದೆ. ಇಷ್ಟೆಲ್ಲದರ ನಡುವೆಯೂ ಇದು ಕಲಾಪಠ್ಯವೆಷ್ಟೋ ಅಷ್ಟೇ ಸಾಂಸ್ಕೃತಿಕ ಪಠ್ಯವೂ ಆಗಿದೆ, ಅಷ್ಟೇ ಮುಖ್ಯವಾದ ಮಹಿಳಾ ಸಂಕಥನದ ಘನ ಕೃತಿಯೂ ಆಗಿದೆ.

●